ಮಾಡಕೂಡದು ಎಂದು ಹೇಳಿದಾಗ ಅವರು ನಾವು ತಹಶೀಲ್ದಾರರಿಂದ ಸಾಗುವಳಿ ಚೀಟಿಯನ್ನು ತಂದಿದ್ದೇವೆ ಎಂದು ಹೇಳಿದರೂ ಕೂಡ ಅದಕ್ಕೆ ಅವರು ಒಪ್ಪದೆ ತಹಶೀಲ್ದಾರರು 50 ರೂಪಾಯಿಗಳನ್ನು ಕೊಟ್ಟರೆ ಸಾಗುವಳಿ ಚೀಟಿ ಕೊಡುತ್ತಾರೆ ಎಂದು ಹೇಳಿ ಆ ಬಡವರಿಗೆ ಆ ಭೂಮಿಯನ್ನು ಉಳುವುದಕ್ಕೆ ತೊಂದರೆ ಕೊಟ್ಟಿದ್ದಾರೆ. ಅಮೃತಮಹಲ್ ಕಾವಲಿನಲ್ಲಿ ಈಚಲು ಮರಗಳು ಏನಿವೆ ಆ ಜಮೀನನ್ನು ಉಳಿಸಿಕೊಂಡು ಬಾಕಿ ಜಮೀನನ್ನು ಬಡ ಜನಗಳಿಗೆ ಹಂಚಿದ್ದಾರೆ. ಅದು ವ್ಯವಸಾಯಕ್ಕೆ ಯೋಗ್ಯವಾದ ಜಮೀನು. ಆ ಜಮೀನನ್ನು ಅವರಿಗೆ ಸಾಗುವಳಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. 10 ಸಾರಿ ಅರ್ಜಿಗಳನ್ನು ಕೊಟ್ಟಿದ್ದೇವೆ. ಆದರೂ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ? ಇದಕ್ಕೆ ಜವಾಬ್ದಾರರು ಯಾರು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾಲ್ಲೂಕು ಲೆವಲ್ ಕಮಿಟಿಯಲ್ಲಿ ಸಾಮಾನ್ಯವಾಗಿ ಜಿಲ್ಲಾ ಮಟ್ಟದ ಎಕ್ಸೈಸ್ ಆಫೀಸರ್ ಇರತಕ್ಕಂತಹ ಪದ್ಧತಿ ಇಲ್ಲ. ಅವರು ಆ ಸಮಯದಲ್ಲಿ ಹೇಗೆ ಮಾಡಿದ್ದಾರೆಂಬುದನ್ನು ವರದಿ ತರಿಸಿಕೊಂಡು ಹೇಳಬೇಕಾಗಿದೆ. ಅದೂ ಅಲ್ಲದೆ ಅವರು ತಹಸೀಲ್ದಾರರವರು 50 ರೂಪಾಯಿ ಕೊಟ್ಟರೆ ಕೊಡುವರು ಎಂದು ಕೂಡ ಹೇಳುತ್ತಿದ್ದಾರೆ. ಆದ್ದರಿಂದ ಇದರಲ್ಲಿ ಎಷ್ಟು ಸತ್ಯಾಂಶ ಇದೆಯೆಂಬುದನ್ನು ನೋಡಬೇಕು. ಆದನ್ನು ವಿಚಾರಿಸುತ್ತೇನೆ. ಆ ಜಮೀನಿನಲ್ಲಿ ಡೇಟ್ ಟ್ರೀ ಬೆಳೆಸುವುದಕ್ಕೆ ರಿಸರ್ವ್ ಮಾಡಿದ್ದರೆ, ಅದನ್ನು ಉಳಿಸಿಕೊಂಡು ಪಕ್ಕದ ಜಮೀನು ಕೊಡುವುದಕ್ಕೆ ವರದಿ ತರಿಸಿಕೊಂಡು ತೀರ್ಮಾನ ಮಾಡಬೇಕಾಗುತ್ತದೆ. ನಾನು ಹಿಂದಿನ ಗಮನ ಸೆಳೆಯುವ ಸೂಚನೆ ಬಗ್ಗೆ ಒಂದು ವಿಷಯವನ್ನು ಇಲ್ಲಿ ಹೇಳುತ್ತೇನೆ. ಅದರಲ್ಲಿ ಇನ್ನಿಬ್ಬರು ತಪ್ಪಿಸಿಕೊಂಡು ಹೋಗಿದ್ದಾರೆ ಎನ್ನುವ ವಿಷಯ ಹೇಳಿತ್ತು. ಈಗ ಅವರಿಬ್ಬರನ್ನು ಕೂಡ ಅರೆಸ್ಟ್ ಮಾಡಿದ್ದೇವೆ. ಅವರು ಪೋಲೀಸ್ ಕಸ್ಟಡಿಯಲ್ಲಿದ್ದಾರೆ.

Statement of the Minister for Education

re : *Admission of Students in Government College, Kolar*

Sri C. BYRE GOWDA (Vemgal).—I request the Hon. Minister for Education to make a statement regarding admission of students in Government College, Kolar.

Sri A. R. BADARINARAYANA (Minister for Education).—In regard to the matter raised by the hon. member regarding admission to the Kolar College, I got in touch with the Principal and have instructed him to see most of the boys are admitted. Now I have received report to the effect that everyone of them has been admitted and there is no trouble. Apart from this, the question of starting a Junior College for Kolar Town is under active consideration of the Government and I hope orders will be issued shortly.

Sri C. BYRE GOWDA.—Will that be Government Junior College ?

Sri A. R. BADARINARAYANA.—Yes, yes.

Notice of adjournment motion re : *Purchasing the three Palaces belonging to the former Maharaja of Mysore*

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಈಗ ಊಟಿ, ಬೆಂಗಳೂರು ಮತ್ತು ಮೈಸೂರು ಅರಮನೆಗಳನ್ನು ಖರೀದಿ ಮಾಡತಕ್ಕ ವಿಷಯದಲ್ಲಿ ಮತ್ತು ಅದರ ಬಗ್ಗೆ 30–40 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ವಿಷಯದಲ್ಲಿ ನಾನು ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೆ. ಅದಕ್ಕೆ ಮುಂಚೆ ಗಮನ ಸೆಳೆಯುವ ಒಂದು ಸೂಚನೆಯನ್ನು ಸಹ ಕಳಿಸಿದ್ದೆ. ಅದಕ್ಕೆ ಕೂಡ